ಉಪತಹಶೀಲ್ದಾರರ ಕಾರ್ಯಾಲಯ, ಮರಿಯಮ್ಮನಹಳ್ಳಿ ಇವರ ನ್ಯಾಯಾಲಯದಲ್ಲಿ

| ವಾದಿ | ಪ್ರತಿವಾದಿ |
| --- | --- |
| ಶ್ರೀಮತಿ ಹಿರಿಯವ್ವ ಲಕ್ಕಿಮರದ<br>ಗಂಡ ಲೇಟ್ ಹನುಮಂತಪ್ಪ,<br>6ನೇ ವಾರ್ಡ್, ಅಂಬೇಡ್ಕರ್ ಭವನದಹತ್ತಿರ,<br>ಮರಿಯಮ್ಮನಹಳ್ಳಿ | ಶ್ರೀಬಂಗಾರಿ ದುರುಗಪ್ಪ<br>ತಾಯಿ ಸಾರೇವ್ವ<br>ಮರಿಯಮ್ಮನಹಳ್ಳಿ |

*******

ಪೀಠಿಕೆ:–

ವಾದಿಯಾದ ಶ್ರೀಮತಿ ಹಿರಿಯವ್ವ ಲಕ್ಕಿಮರದ ಗಂಡ ಲೇಟ್ ಹನುಮಂತಪ್ಪ, 6ನೇ ವಾರ್ಡ್, ಮರಿಯಮ್ಮಹಳ್ಳಿ ಇವರು ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ನಂದಿಬಂಡೆ ಗ್ರಾಮದ ಸ.ನಂ. 39ಎ1/ಹೆಚ್ ವಿಸ್ತೀರ್ಣ 3.86 ಎಕರೆ ಜಮೀನನ್ನು ಪೋತಿವಾರು ಪ್ರಕಾರ ಹಕ್ಕು ಬದಲಾವಣೆ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುವ ಮೇರೆಗೆ, ನಮೂನೆ–21 ನ್ನು ಮುದ್ರಿಸಿ ಗ್ರಾಮಲೆಕ್ಕಿಗರು, ನಂದಿಬಂಡೆ ಇವರಿಗೆ ಜಾರಿ ಮಾಡಲು ನೀಡಿದ್ದು, ಸಂಬಂಧಪಟ್ಟವರಿಗೆ ಜಾರಿ ಮಾಡಿ, ಗ್ರಾಮದಲ್ಲಿ ಪ್ರಚುರ ಪಡಿಸಿರುತ್ತಾರೆ. ನಿಗಧಿತ ಅವಧಿಯೊಳಗೆ ಪ್ರತಿವಾದಿಗಳಾದ ಶ್ರೀ ಬಂಗಾರಿ ದುರುಗಪ್ಪ ತಾಯಿ ಸಾರೆವ್ವ, ಮರಿಯಮ್ಮನಹಳ್ಳಿ ಗ್ರಾಮ, ಇವರು ದಿನಾಂಕ 01–12–2014 ರಂದು ತಕರಾರು ಅರ್ಜಿ ಸಲ್ಲಿಸಿದ್ದು, ಕಂದಾಯ ನಿರೀಕ್ಷಕರು ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ನೈಸರ್ಗಿಕ ನ್ಯಾಯದ ಹಿತ ದೃಷ್ಟಿಯಿಂದ ಎರಡು ಪಕ್ಷದವರಿಗೆ ಅವಕಾಶ ನೀಡಿ, ಪ್ರಕರಣದ ವಿಚಾರಣೆಯನ್ನು ದಿನಾಂಕ 14–12–2015 ರಂದು ಪ್ರಾರಂಭಿಸಿ ದಿನಾಂಕ 16–05–2016 ರಂದು ಮುಕ್ತಾಯಗೊಳಿಸಲಾಯಿತು.

ವಾದಿಯು ವಿಚಾರಣೆಗೆ ಹಾಜರಾಗಿ, ವಾದವನ್ನು ಮಂಡಿಸುತ್ತಾ, ವಿವಾದಾಸ್ಪದ ಜಮೀನು ಗಂಡನಾದ ಹನುಮಂತಪ್ಪ ಇವರ ಹೆಸರಿನಲ್ಲಿದ್ದು, ಹನುಮಂತಪ್ಪ ರವರು ಮರಣ ಹೊಂದಿರುವುದರಿಂದ ಅವರ ಏಕೈಕ ಹೆಂಡತಿಯಾದ ನನ್ನ ಹೆಸರಿಗೆ ಪೋತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಬೇಕೆಂದು ಕೋರುತ್ತಾ, ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

ಪ್ರತಿವಾದಿಯು ವಿವಾದಾಸ್ಪದ ಜಮೀನು ಪೂರ್ವಾರ್ಜಿತವಾದ ಆಸ್ತಿಯಾಗಿದ್ದು, ಬೊಕ್ಕ ದುರುಗಪ್ಪಗೆ 1) ದೊಡ್ಡ ಸಾರೆವ್ವ 2) ಹನುಮಂತಪ್ಪ 3) ದುರುಗಪ್ಪ 4) ಸಣ್ಣ ಸಾರೇವ್ವ ಎಂದು ನಾಲ್ಕು ಜನ ಮಕ್ಕಳಿದ್ದು, ವಿವಾದಸ್ಪದ ಜಮೀನು ನಾಲ್ಕು ಜನ ಮಕ್ಕಳಿಗೆ ಸಂಬಂಧಪಟ್ಟಿರುತ್ತದೆ. ಕಾರಣ ಹಕ್ಕು ಬದಲಾವಣೆ ಮಾಡಬಾರದೆಂದು ಲಿಖಿತ ರೂಪದಲ್ಲಿ ತಕರಾರು ಅರ್ಜಿಯನ್ನು ಸಲ್ಲಿಸಿ, ವಿಚಾರಣೆಗೆ ಹಾಜರಾಗಿ ವಾದವನ್ನು ಮಂಡಿಸುತ್ತಾ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿರುತ್ತಾರೆ.

ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳು ಕಂಡು ಬರುತ್ತವೆ.

2ನೇ ಪುಟಕ್ಕೆ. . . . . . .

1. ವಿವಾದಸ್ಪದ ಜಮೀನಿನ 1967-68 ರಿಂದ ಪ್ರಸ್ತುತ ಸಾಲಿನ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಪಹಣಿ ಕಾಲಂ ನಂ.9 ರಲ್ಲಿ ಹರಿಜನ ಬೊಕ್ಕ ದುರುಗವ್ವನ ಮಗ ಹನುಮಂತಪ್ಪ ಎಂದು ನಮೂದಿರುವುದು ಕಂಡುಬರುತ್ತದೆ.
2. ಹರಿಜನ ಬೊಕ್ಕ ದುರುಗವ್ವನ ಮಗ ಹನುಮಂತಪ್ಪ ರವರು ಮರಣ ಹೊಂದಿದ್ದು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ.
3. ಹಾಜರುಪಡಿಸಿರುವ ಮರಣ ಪ್ರಮಾಣ ಪತ್ರದಲ್ಲಿ ಹೆಂಡಿ ಹನುಮಂತಪ್ಪ ತಾಯಿ ಲಕ್ಕಿಮರದ ದುರುಗಮ್ಮ ಎಂದು ಹಾಗೂ ಚುನಾವಣಾ ಗುರುತಿನ ಚೀಟಿಯಲ್ಲಿ ಎನ್.ಡಿ.ಹನುಮಂತಪ್ಪ ತಾಯಿ ಲಕ್ಕಿಮರದ ಬುಕ್ ದುರುಗಮ್ಮ ಎಂದು ನಮೂದಾಗಿದ್ದು, ಚುನಾವಣಾ ಗುರುತಿನ ಚೀಟಿ ಮತ್ತು ಮರಣ ಪ್ರಮಾಣ ಪತ್ರದಲ್ಲಿ ಹೆಸರು ವ್ಯತ್ಯಾಸ ಕಂಡುಬಂದಿರುವುದರಿಂದ ಈ ಎರೆಡು ಹೆಸರಿನ ವ್ಯಕ್ತಿ ಒಬ್ಬರೆ ಆಗಿರುವುದಾಗಿ ಪ್ರಮಾಣಿಕರಿಸಿ ವಾದಿಯು ಕೋರ್ಟ್ ಅಫಿಡವಿಟ್ ಸಲ್ಲಿಸಿರುತ್ತಾರೆ.

ಕಾರಣ ಮೇಲಿನ ಎಲ್ಲಾ ಅಂಶಗಳನ್ವಯ ಹಾಗೂ ಪ್ರತಿವಾದಿಯು ಪೂರಕ ದಾಖಲೆಗಳನ್ನು ಸಲ್ಲಿಸಿ ತಮ್ಮ ಹಕ್ಕನ್ನು ಸಾಬೀತು ಪಡಿಸುವಲ್ಲಿ ವಿಫಲರಾಗಿರುವುದರಿಂದ ಈ ಕೆಳಕಂಡಂತೆ.

## ಆದೇಶ

ಸಂ/ಕಂ/ನಾಕಮ/ತಕರಾರು/15/2015-16 ದಿನಾಂಕ 13-06-2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ ವಾಸ್ತವಾಂಶ, ದಾಖಲೆಗಳ ಮತ್ತು ಕಾರಣಗಳಿಂದ ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ನಂದಿಬಂಡೆ ಗ್ರಾಮದ ಸ.ನಂ. 39ಎ1/ಹೆಚ್ ವಿಸ್ತೀರ್ಣ 3.86 ಎಕರೆ ಜಮೀನನ್ನು ಮೋತಿವಾರಸು ಮತ್ತು ವಹಿವಾಟು ಸಂಖ್ಯೆ 27 ರ ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರಿಗೆ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ 13-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ತಾಲೂಕು ಕಛೇರಿ, ಹೊಸಪೇಟೆ.
TALUKA OFFICE, HOSPET.
ಕಡತ ಸಂಖ್ಯೆ
ದಿನಾಂಕ

ಉಪತಹಶೀಲ್ದಾರರು,
ನಾಡಕಛೇರಿ, ಮರಿಯಮ್ಮನಹಳ್ಳಿ

ಗೆ,

ವಾದಿ ಮತ್ತು ಪ್ರತಿವಾದಿಗೆ.

ಪ್ರತಿಯನ್ನು ಭೂಮಿ ಶಾಖೆ, ಹೊಸಪೇಟೆ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.